ದಿಃ **13.08.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಎಲ್ ಎಂ ಎ ವಕೀಲರಿಂದ ಏಳನೇ ಪ್ರತಿವಾದಿಯ ಪರ</u>

ನನಗೆ ಇಂಗ್ಲೀಷ್ ಭಾಷೆ ಓದಲು ಬರೆಯಲು ಬರುತ್ತದೆ. ಈಗ ತೋರಿಸಿದ ದಾಖಲಾತಿಯು ಅಶೀಶ್ ಜೈನ್ ಎನ್ನುವವರಿಗೆ "ದೇವಗಿರಿ ಟೀ ಪೌಡರ್" ಕ್ಲಾಸ್ 30 ಎಂಬ ಬಗ್ಗೆ ನೀಡಿದಂತಹ ಟ್ರೇಡ್ ಮಾರ್ಕ್ ರಿಜಿಸ್ಟ್ರೇಶನ್ ಸರ್ಟಿಫೀಕೆಟ್ ಆಗಿರುತ್ತದೆ ಅಂದರೆ ಸರಿ. ಸದರಿ ಸರ್ಟಿಫೀಕೆಟ್ ನ್ನು ಸಾಕ್ಷಿ ನೋಡಿ ಒಪ್ಪಿರುವುದರಿಂದ ಅದನ್ನು ನಿಡಿ**-1** ಎಂದು ಗುರುತಿಸಲಾಯಿತು. ಸಾಕ್ಷಿ ಸ್ವ ಇಚ್ಚೆಯಿಂದ ಹೇಳುತ್ತಾರೆ ದೇವಗಿರಿ ಟೀ ಪೌಡರ್ ಎಂಬ ಹೆಸರಿನಲ್ಲಿ ನಾನು 1977 ರಲ್ಲಿಯೇ ನಾನು ಟ್ರೇಡ್ ಮಾರ್ಕ್ ಹೊಂದಿರುತ್ತೇನೆ ಎಂದು .

ಈಗ ತೋರಿಸಿದ ದಾಖಲಾತಿಯು ರಫೀಕ್ ಅಬ್ದುಲ್ ಪಠಾಣ್ ಎನ್ನುವವರಿಗೆ "ದೇವಗಿರಿ ಮಹರಾಜ್ ಟೀ ಪೌಡರ್" ಕ್ಲಾಸ್ 30 ಎಂಬ ಬಗ್ಗೆ ನೀಡಿದಂತಹ ಟ್ರೇಡ್ ಮಾರ್ಕ್ ರಿಜಿಸ್ಟ್ರೇಶನ್ ಸರ್ಟಿಫೀಕೆಟ್ ಆಗಿರುತ್ತದೆ ಅಂದರೆ ಸರಿ. ಸದರಿ ಸರ್ಟಿಫೀಕೆಟ್ ನ್ನು ಸಾಕ್ಷಿ ನೋಡಿ ಒಪ್ಪಿರುವುದರಿಂದ ಅದನ್ನು ನಿಡಿ**-2** ಎಂದು ಗುರುತಿಸಲಾಯಿತು.

ಈಗ ತೋರಿಸಿದ ದಾಖಲಾತಿಯು ದೀಪಕ್ ಸುರೇಶ್ ಗಾವಲೇ ಎನ್ನುವವರಿಗೆ "ದೇವಗಿರಿ ನಾಮ್ಕಿನ್" ಕ್ಲಾಸ್ 30 ಎಂಬ ಬಗ್ಗೆ ನೀಡಿದಂತಹ ಟ್ರೇಡ್ ಮಾರ್ಕ್ ರಿಜಿಸ್ಟ್ರೇಶನ್ ಸರ್ಟಿಫೀಕೆಟ್ ಆಗಿರುತ್ತದೆ ಅಂದರೆ ಸರಿ.ಸದರಿ ಸರ್ಟಿಫೀಕೆಟ್ ನ್ನು ಸಾಕ್ಷಿ ನೋಡಿ ಒಪ್ಪಿರುವುದರಿಂದ ಅದನ್ನು ನಿಡಿ**-3** ಎಂದು ಗುರುತಿಸಲಾಯಿತು.

ನಾನು ಟೀ ಪೌಡರ್ ಕುರಿತು ಕ್ಲಾಸ್ 35 "ದೇವಗಿರಿ" ಎಂಬ ಬಗ್ಗೆ ಟ್ರೇಡ್ ಮಾರ್ಕ್ ಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ನಾನು ಸಲ್ಲಿಸಿದ ಸದರಿ ಅರ್ಜಿಗೆ ವಿರೋಧ ವ್ಯಕ್ತವಾಗಿತ್ತು ಎಂದರೆ ಸರಿ. ಈಗ ತೋರಿಸಿದ ದಾಖಲಾತಿಯು ನಾನು ಟ್ರೇಡ್ ಮಾರ್ಕ್ ಕುರಿತು ಅರ್ಜಿ ಎಂದರೆ ಸರಿ. ಸಾಕ್ಷಿಯು ಸದರಿ ಅರ್ಜಿಯನ್ನು ನೋಡಿ ಒಪ್ಪುತ್ತಿರುವುದರಿಂದ ಅದನ್ನು ನಿಡಿ**-4** ರಂತೆ ಗುರುತಿಸಲಾಯಿತು.

ಈಗ ತೋರಿಸಿದ ದಾಖಲಾತಿಯು Assistance Registrar Trade Mark ರವರು ನೀಡಿದ search certificate ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲಾತಿಯನ್ನು ಓದಿ ನೋಡಿ ಒಪ್ಪುತ್ತಿರುವುದರಿಂದ ಅದನ್ನು ನಿಡಿ**-5** ರಂತೆ

ಗುರುತಿಸಲಾಯಿತು. ನಿಡಿ-5 ರಂತೆ "ವೇದಗಿರಿ" ಟ್ರೇಡ್ ಮಾರ್ಕ್ ಗೆ ಬೇರೆ ಟೀ ಪೌಡರ್ ಬ್ರಾಂಡ್ ನೊಂದಿಗೆ ಯಾವುದೇ conflict ಮಾರ್ಕ್ ಇರುವುದಿಲ್ಲ ಎಂದರೆ ಸರಿ.

ಈಗ ತೋರಿಸಿದ ದಾಖಲಾತಿಯು ಟ್ರೇಡ್ ಮಾರ್ಕ್ ನವರು 7ನೇ ಪ್ರತಿವಾದಿಗೆ ನೀಡಿದ examination report ಎಂದರೆ ಸರಿ. ಸಾಕ್ಷಿಯು ಅದನ್ನು ನೋಡಿ ಒಪ್ಪುತ್ತಿರುವುದರಿಂದ ಅದನ್ನು ನಿಡಿ-**6** ರಂತೆ ಗುರುತಿಸಲಾಯಿತು. "ವೇದಗಿರಿ" ಬ್ರಾಂಡ್ ಟ್ರೇಡ್ ಮಾರ್ಕ್ ಗೆ "ವೇದಗಿರಿ ಹರ್ಬಲ್ಸ್" ಎಂಬ ಒಂದೇ conflict ಇರುತ್ತದೆ ಎಂದರೆ ಸರಿ.

ನಾನು "ದೇವಗಿರಿ" ಕ್ಲಾಸ್ 30 ಟೀ ಪೌಡರ್ ಬಗ್ಗೆ ಅರ್ಜಿಯನ್ನು ದಿನಾಂಕ 23.09.2022 ರಂದು Registrar of Trade Mark ರವರಿಗೆ ನೀಡಿದ್ದೆ ಎಂದರೆ ಸರಿ. 7ನೇ ಪ್ರತಿವಾದಿಯು ಸಹ ದಿನಾಂಕ 03.06.2022 ರಂದು "ವೇದಗಿರಿ" ಕ್ಲಾಸ್ 30 ಟೀ ಪೌಡರ್ ಬಗ್ಗೆ Registrar of Trade Mark ರವರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. 7ನೇ ಪ್ರತಿವಾದಿ ಅರ್ಜಿ ಸಲ್ಲಿಸಿದ ಮೂರು ತಿಂಗಳ ನಂತರ ನಾನು Registrar of Trade Mark ರವರಿಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ.

7ನೇ ಪ್ರತಿವಾದಿಯು ಸಲ್ಲಿಸಿದ ಕ್ಲಾಸ್ 30 "ವೇದಗಿರಿ" ಟೀ ಪೌಡರ್ ಟ್ರೇಡ್ ಮಾರ್ಕ್ ಗೆ ನಾನು ದಿನಾಂಕ 04.07.2023 ರಂದು ಆಕ್ಷೇಪ ಸಲ್ಲಿಸಿದೆ ಎಂದರೆ ಸರಿ. ಈಗ ತೋರಿಸಿದ ದಾಖಲಾತಿಯು ನಾನು ಆ ರೀತಿ ಸಲ್ಲಿಸಿದ ಆಕ್ಷೇಪದ ಕುರಿತು ಟ್ರೇಡ್ ಮಾರ್ಕ್ ನವರು ನೀಡಿದ ಪತ್ರ ಎಂದರೆ ಸರಿ. ಸಾಕ್ಷಿಯು ಅದನ್ನು ನೋಡಿ ಒಪ್ಪುತ್ತಿರುವುದರಿಂದ ಅದನ್ನು ನಿಡಿ-**7** ರಂತೆ ಗುರುತಿಸಲಾಯಿತು.

ನಾನು ಕ್ಲಾಸ್ 35 "ದೇವಗಿರಿ" ಟ್ರೇಡ್ ಮಾರ್ಕ್ ಬಗ್ಗೆ Registrar of Trade Mark ರವರಿಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ . ಆ ಅರ್ಜಿಗೆ ಎರಡು conflict ಗಳು ಬಂದಿದ್ದವು ಎಂದರೆ ಸರಿ. ಆ ರೀತಿ ಬಂದ ಎರಡು conflict ಗಳು ಎಂದರೆ "ದೇವಗಿರಿ ಮಹಾನಂದ" ಮತ್ತು "ದೇವಗಿರಿ ಸುಪರ್" ಎಂಬುದಾಗಿರುತ್ತದೆ ಎಂದರೆ ಸರಿ. ಈಗ ತೋರಿಸಿದ ದಾಖಲಾತಿಯು ಆ ಬಗ್ಗೆ ನೀಡಿದ examination report ಎಂದರೆ ಸರಿ. ಸಾಕ್ಷಿಯು ಅದನ್ನು ನೋಡಿ ಒಪ್ಪುತ್ತಿರುವುದರಿಂದ ಅದನ್ನು ನಿಡಿ-**8** ರಂತೆ ಗುರುತಿಸಲಾಯಿತು.

ಈಗ ತೋರಿಸಿದ ದಾಖಲಾತಿಯು 7ನೇ ಪ್ರತಿವಾದಿಯು ತನ್ನ ಹೆಸರಿನಲ್ಲಿ "ವೇದಗಿರಿ" ಎಂಬ ಹೆಸರಿನಲ್ಲಿ ಪಡೆದ copyright ಎಂದರೆ ಸರಿ. ಸಾಕ್ಷಿಯು ಅದನ್ನು ನೋಡಿ ಒಪ್ಪುತ್ತಿರುವುದರಿಂದ ಅದನ್ನು ನಿಡಿ-**9** ರಂತೆ ಗುರುತಿಸಲಾಯಿತು.

ಮಂಗಳೂರು ನಗರದಲ್ಲಿ Malls ಮತ್ತು ಸೂಪರ್ ಮಾರ್ಕೇಟ್ ಗಳು ಇವೆ ಎಂದರೆ ಸರಿ. Malls ಮತ್ತು ಸೂಪರ್ ಮಾರ್ಕೇಟ್ ಗಳಲ್ಲಿ ಎಲ್ಲಾ ಬಗೆಯ ವಿವಿಧ ಬ್ರಾಂಡ್ ನ ಟೀ ಪೌಡರ್ ಗಳನ್ನು ಖರೀದಿದಾರರಿಗೆ ಮುಕ್ತವಾಗಿ ನೋಡಿ ಖರೀದಿಸಲು ಇಟ್ಟಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಖರೀದಿದಾರರು ಬ್ರಾಂಡ್ ನ ಹೆಸರನ್ನು ಓದಿ ತನಗೆ ಯಾವುದು ಬೇಕು ಅದನ್ನು ಆಯ್ಕೆ ಮಾಡಿಕೊಂಡು ಖರೀದಿ ಮಾಡುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಅಥವಾ ಸಣ್ಣ ಪೇಟೆಗಳಲ್ಲಿ ವಿವಿಧ ಬ್ರಾಂಡ್ ನ ಟೀ ಪೌಡರ್ ಗಳನ್ನು ಮಾರಾಟಕ್ಕೆ ಇಡುತ್ತಾರೆ ಎಂದರೆ ಸರಿ. ಅಲ್ಲಿ ಖರೀದಿದಾರರು ಯಾವ ಹೆಸರಿನ ಟೀ ಪೌಡರನ್ನು ಕೇಳುತ್ತಾರೋ ಆ ಹೆಸರಿನ ಟೀ ಪೌಡರ್ ಅನ್ನು ಅಂಗಡಿ ಮಾಲಕ ಕೊಡುತ್ತಾರೆ ಎಂದರೆ ಸರಿ. ಈಗ ತೋರಿಸಿದ “Devagiri”, "Vedagiri", “Red Label”, “Devinegiri” “Vijayagiri” ಟೀ ಪೌಡರ್ ಗಳನ್ನು ಸಾಮಾನ್ಯವಾಗಿ ಅಂಗಡಿಗಳಲ್ಲಿ ಇಟ್ಟಿರುತ್ತಾರೆ ಎಂದರೆ ಸರಿ. ಸದರಿ pouch ಗಳಲ್ಲಿ “Red Label” ಅನ್ನು ಹೊರತು ಪಡಿಸಿ ಉಳಿದ ಎಲ್ಲಾ pouch ಗಳು ಕೆಂಪು ಬಣ್ಣವನ್ನು ಹೊಂದಿದ್ದು ಅಂಚಿಗೆ ಹಳದಿ ಬಣ್ಣದ boarder ಹೊಂದಿರುತ್ತವೆ ಎಂದರೆ ಸರಿ. “Red Label” pouch ಕೆಂಪು ಬಣ್ಣದಿಂದ ಕೂಡಿದ್ದು ಹಳದಿ ಬಣ್ಣದ ಎರಡು ಕಪ್ಪುಗಳು ಇರುತ್ತವೆ ಎಂದರೆ ಸರಿ. ಸದರಿ ಎಲ್ಲಾ ಪ್ಯಾಕುಗಳನ್ನು (5) ವಕೀಲರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ಒಟ್ಟಿಗೆ ನಿಡಿ-**10** ರಂತೆ ಗುರುತಿಸಲಾಯಿತು.

ಈ ಹಂತದಲ್ಲಿ ಸಮಯದ ಅಭಾವದಿಂದ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.